**ದಿನಾಂಕ:08-02-2024 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಪಾಟೀ ಸವಾಲುಃ 1 ರಿಂದ 5 ನೇ ಪ್ರತಿವಾದಿ ಪರ ಶ್ರೀ.ಜಿ ಹೆಚ್ ಬಿ ವಕೀಲರಿಂದ :**

ದಾವಾ ಶೆಡ್ಯೂಲ ಸಿ ಆಸ್ತಿಗಳ ಸರ್ವೇ ನಂಬರ 10, 65, 62, 83 ಆಗಿರುತ್ತವೆ. ಇನ್ನು ಕೆಲವು ಆಸ್ತಿಗಳಿದ್ದು, ಅವುಗಳು ಈಗ ನನಗೆ ನೆನಪಿಲ್ಲ. ಅವುಗಳ ವಿಸ್ತೀರ್ಣ ನನಗೆ ಈಗ ನೆನಪಿಲ್ಲ. ಸರ್ವೇ ನಂಬರ 1/7 ರ ಜಮೀನು ಯಾರ ಹೆಸರಿನಲ್ಲಿದೆ ಎಂಬುದು ಈಗ ನನಗೆ ನೆನಪಿಲ್ಲ. ಅದರ

ವಿಸ್ತೀರ್ಣ ನನಗೆ ನೆನಪಿಲ್ಲ. ಸರ್ವೇ ನಂಬರ 1/8 ರ ಆಸ್ತಿ ನನ್ನ ಕಾಕನ ಹೆಸರಿನಲ್ಲಿದೆ ಆದರೆ ಅವರ ಹೆಸರು ನನಗೆ ಈಗ ನೆನಪಿಲ್ಲ. ಸರ್ವೇ ನಂಬರ 62/4 ರ ಜಮೀನು ಈಗ 2 ನೇ ಪ್ರತಿವಾದಿಯ ಹೆಸರಿನಲ್ಲಿದೆ. ಅದರ ವಿಸ್ತೀರ್ಣ ಈಗ ನನಗೆ ನೆನಪಿಲ್ಲ. ಸರ್ವೇ ನಂಬರ 65/2 ಅ ರ ಜಮೀನು ನಮ್ಮ ಕಾಕನ ಹೆಸರಿನಲ್ಲಿದ್ದು, ಅವರ ಹೆಸರು ಈಗ ನನಗೆ ನೆನಪಿಲ್ಲ. ಜಿ ಪಿ ಸಿ ನಂಬರ 42 ರ ಆಸ್ತಿ 20 ನೇ ಪ್ರತಿವಾದಿಯ ಹೆಸರಿನಲ್ಲಿದೆ. ಸರ್ವೇ ನಂಬರ 1/7 ರ ಆಸ್ತಿಯನ್ನು ಯಾರು ಯಾರ ಹೆಸರಿನಲ್ಲಿ ಖರೀದಿಗೆ ಹಿಡಿದಿದ್ದಾರೆ ಎನ್ನುವುದು ಈಗ ನನಗೆ ನೆನಪಿಲ್ಲ. ದಾವಾ ಆಸ್ತಿಗಳಿಗೆ ಸಂಬಂದಪಟ್ಟ ಎಲ್ಲಾ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸರ್ವೇ ನಂಬರ 1/7 ರ ಆಸ್ತಿಯನ್ನು 1 ನೇ ಪ್ರತಿವಾದಿ ದ್ಯಾಮನಗೌಡರವರಿಂದ ಖರೀದಿಗೆ ಪಡೆದಿದ್ದಾರೆ ಎಂದರೆ ನನಗೆ ಈಗ ನೆನಪಿಲ್ಲ. ಆ ಜಮೀನನ್ನು ದಿಃ02-05-2000 ರಂದು ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿ ಸಾಕ್ಷಿಯು ಒಟ್ಟು ಕುಟುಂಬದಿಂದ 1 ನೇ ಪ್ರತಿವಾದಿಯ ಹೆಸರಿಗೆ ಖರೀದಿಸಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಈ ರೀತಿ ಖರೀದಿ ಪಡೆದಿದ್ದರಿಂದಲೂ ಸಹ ಆ ಆಸ್ತಿಯಲ್ಲಿ 1 ನೇ ಪ್ರತಿವಾದಿಯ ಹೆಸರು ಮುಂದುವರೆದುಕೊಂಡು ಬಂದಿರುತ್ತದೆ ಎಂದರೆ ಸರಿ. ಈ ರೀತಿ ಖರೀದಿಗೆ ಪಡೆದ ನಂತರ ಅವರ ಹೆಸರಿನಲ್ಲಿಯೇ ಡ ಮಂಜೂರಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಒಟ್ಟು ಕುಟುಂಬದ ಪರವಾಗಿ ಖರೀದಿಸಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಈ ಬಗ್ಗೆ ಡ ನಂಬರ 1038 ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಡ ನಂಬರ 1038 ಅನ್ನು ನಾನು ಈವರೆಗೂ ಸಹ ಪ್ರಶ್ನಿಸಿರುವುದಿಲ್ಲ. ಆ ಡ ವನ್ನು ಪರಿಶೀಲಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ದಾವಾ ಶೆಡ್ಯೂಲ ಸಿ ರ 62/4 ರ ಮೂಲ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ಈ ಆಸ್ತಿಯನ್ನು 1 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿಸಿದ್ದಾರೆ ಎಂದರ ಸರಿ. ಸಾಕ್ಷಿಯು ಒಟ್ಟು ಕುಟುಂಬದ ಪರವಾಗಿ ಖರೀದಿಸಿದ್ದಾರೆ ಎಂದು ಮುಂದುವರೆದು ನುಡಿಯುತ್ತಾರೆ. ಖರೀದಿಸಿದ ದಿನದಿಂದಲೂ ಸಹ ಆ ಆಸ್ತಿಯ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಮುಂದುವರೆದುಕೊಂಡು ಬಂದಿರುತ್ತವೆ ಎಂದರೆ ಸರಿ. ಸಾಕ್ಷಿಯು ಒಟ್ಟು ಕುಟುಂಬದ ಪರವಾಗಿ ಖರೀದಿಸಲಾಗಿದೆ ಎಂದು ಸ್ವತಃ ನುಡಿಯುತ್ತಾರೆ.

ದಾವಾ ಶೆಡ್ಯೂಲ ಸಿ ಸರ್ವೇ ನಂಬರ 62/4 ರ ಆಸ್ತಿ 1 ನೇ ಪ್ರತಿವಾದಿ ತಾನು ದುಡಿದು ಗಳಿಸಿದ ಹಣದಿಂದ ಖರೀದಿಸಿದ್ದು, ಅವರುಗಳೆ ಅದರ ವಹಿವಾಟು ಹೊಂದಿದ್ದಾರೆ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಪರವಾಗಿ ಖರೀದಿಸಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಈ ಆಸ್ತಿಯನ್ನು ದಿಃ 16-08-2010 ರಂದು ಖರೀದಿಸಿದ್ದಾರೆ ಎಂದರೆ ಸರಿ. ಆ ಖರೀದಿ ಪತ್ರದಲ್ಲಿ ಈ

ಆಸ್ತಿಯನ್ನು 1 ನೇ ಪ್ರತಿವಾದಿ ಒಟ್ಟು ಕುಟುಂಬದ ಪರವಾಗಿ ಖರೀದಿಸಿದ್ದಾರೆ ಎಂದು ನಮೂದಾಗಿರುವುದಿಲ್ಲ. ಈ ಖರೀದಿಗೆ ಸಂಬಂದಪಟ್ಟ ಡ ವನ್ನು ನಾನು ಎಲ್ಲಿಯೂ ಸಹ ಪ್ರಶ್ನಿಸಿರುವುದಿಲ್ಲ.

ದಾವಾ ಸಿ ಸರ್ವೇ ನಂಬರ 1/8 ರ ಆಸ್ತಿಯನ್ನು ಯಾರಿಂದ ಖರೀದಿದರು ಎಂಬುದು ನನಗೆ ಈಗ ನೆನಪಿರುವುದಿಲ್ಲ. ಈ ಆಸ್ತಿಯನ್ನು 2 ನೇ ಪ್ರತಿವಾದಿ ದ್ಯಾಮನಗೌಡ ರವರ ಕಡೆಯಿಂದ ಖರೀದಿಸಿದ್ದಾರೆ ಎಂದರೆ ಸರಿ. ಸಾಕ್ಷಿಯು ಒಟ್ಟು ಕುಟುಂಬದ ಪರವಾಗಿ ಖರೀದಿಸಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಈ ರಿತೀ ಖರೀದಿಗೆ ಪಡೆದಿದ್ದ ದಿನದಿಂಲೂ ಸಹ ಆ ಆಸ್ತಿಯಲ್ಲಿ 2 ನೇ ಪ್ರತಿವಾದಿಯೇ ವ್ಯವಸಾಯ ಮಾಡುತ್ತಾ ಬಂದಿದ್ದಾರೆ ಎಂದರ ಸರಿಯಲ್ಲ, ಸಾಕ್ಷಿಯು ಎಲ್ಲರೂ ಒಟ್ಟಿಗೆ ಮಾಡುತ್ತಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಈ ಆಸ್ತಿಯಲ್ಲಿ 2 ನೇ ಪ್ರತಿವಾದಿಯೆ ವ್ಯವಸಾಯ ಮಾಡುತ್ತಿರುವುದರಿಂದ ಎಲ್ಲಾ ದಾಖಲೆಗಳು ಆತನ ಹೆಸರಿನಲ್ಲಿಯೆ ಮುಂದುವರೆದುಕೊಂಡು ಬಂದಿರುತ್ತವೆ ಎಂದರೆ ಸರಿಯಲ್ಲ. ಈ ಬಗ್ಗೆ ಆ ಆಸ್ತಿಯ ದಾಖಲೆಗಳು 2 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ಕರಾರಿನಿಂದ ಅವರ ಬ್ಯಾಂಕನಲ್ಲಿ ಸಾಲ, ಹಾಗೂ ಸರಕಾರಿ ಸೌಲಭ್ಯಗಳನು ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಆ ಕಾರಣದಿಂದಲೇ ಈ ದಾವೆ ಸಲ್ಲಿಸಿದ್ದೇನೆ ಎಂದು ಸ್ವತಃ ನುಡಿಯುತ್ತಾರೆ. ಈ ಬಗ್ಗೆ ಡ ನಂಬರ 1037 ಮಂಜೂರಾಗಿರುತ್ತದೆ ಎಂದರೆ ಸರಿ.

ದಾವಾ ಶೆಡ್ಯೂಲ ಸಿ 1 ಸರ್ವೆ ನಂಬರ 1/7, 1/8, 62/4 ರ ಆಸ್ತಿಗಳು 1 ಮತ್ತು 2 ನೇ ಪ್ರತಿವಾದಿಯರ ಸ್ವಗಳಿಕೆಯಿಂದ ಖರೀದಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ಅವುಗಳು ಎಂದೂ ಸಹ ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಆಸ್ತಿಗಳಲ್ಲಿ ಹಿಸ್ಸೆ ಪಡೆಯಬೇಕೆಂಬ ಉದ್ದೇಶದಿಂದ ಒಟ್ಟು ಕುಟುಂಬದ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರು ಹೊಟೆಲ ವ್ಯವಹಾರ ಮತ್ತು ಭತ್ತದ ವ್ಯಾಪಾರ ಮಾಡಿ ಬಂದ ಹಣದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರು ಖರೀದಿಸಿದ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಅವರುಗಳು ಎಂದೂ ಸಹ ಒಟ್ಟು ಕುಟುಂಬದ ಪರವಾಗಿ ಈರ ಆಸ್ತಿಗಳನ್ನು ಖರೀದಿಸಿರುವುದಿಲ್ಲ ಎಂದರೆ ಸರಿಯಲ್ಲ.

: **ಮರುವಿಚಾರಣೆ** : **ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ